ಮದುವೆ ಅಂತಾ ಮಾಡ್ಕೊಳ್ಳೋ, ತಲೆಯಾಗ್ಲೆ ಅರ್ಧ ಬೋಳಾಗಿ ಹೋಯ್ತು. ನಿನ್ನೇನು ಯಾವುದೋ ಮಠಕ್ಕೆ ಸ್ವಾಮಿಯಾಗಲು ಆಮಂತ್ರಿಸ್ತಾರೆ ಅಂತಾ ಕಾಯ್ತಿದಿಯೇನೋ?...' ಎಂದು ಕಾಳಜಿಯಿಂದ ಕಾಡುತ್ತಿದ್ದ ಕೊನೆಯ ಕೊಂಡಿ ಅಮ್ಮ ಹೋಗಿಯೇ ಮೂರು ವರ್ಷವಾಯ್ತು. ಕೈಬೋಗಣಿಯಲ್ಲಿ ಸ್ವಲ್ಪ ಕಾಫಿಯುಳಿದದ್ದು ನೆನಪಾಗಿ ಮತ್ತೆ ಕಪ್ಪಿಗೆ ಸುರುವಿಕೊಂಡು ಬಂದ. ಐದು ಗಂಟೆಗೆ ಎಚ್ಚರಾಗಿ ಬಿಡುತ್ತದೆ. ಮತ್ತೆಲ್ಲ ಕವಾಯತಿನ ಹಾಗೆ. ಸೋಳ್ಳೆಪರದೆ ಮಡಿಸಿಹಾಕಿ, ಹಲ್ಲುಜ್ಜಿ ಸೀದಾ ಅಡುಗೆ ಮನೆಗೆ. ಕಾಫಿಕಪ್ಪು ಕೈಗೆ ಬಂದದ್ದೇ ಬಾಲ್ಕನಿಗೆ. ಚಿಕ್ಕ ಸೈಟಿನಲ್ಲಿ ದಾರಿಯಿಂದ ಇಂಚೂ ಜಾಗಬಿಡದೆ ಗೂಟ ನೆಟ್ಟಂತೆ ಕಟ್ಟಿದ ಕಟ್ಟಡ. ಒಂದು ಮೊಳದಗಲದ ಹೆಸರಿಗೆ ಬಾಲ್ಕನಿ. ಆದರೆ ಹೊರಜಗತ್ತಿಗೆ ಯಾರ ಅಂಕೆಯಿಲ್ಲದೆ ತನ್ನನ್ನು ಹಾರಿಬಿಡುವ ಈ ಮೂಲೆ ಅವನಿಗೆ ಅಂತರಿಕ್ಷ ನೌಕೆ. ಕಪ್ಪನ್ನು ಒಲೆಯ ಹತ್ತಿರವಿಡುವಾಗ ಕಿಡಕಿಯಿಂದ ಹೊಂಬಣ್ಣ ಕಾಣಿಸಿತು. ತಟ್ಟನೆ ನೆನಪಾಗಿ ಮತ್ತೆ ಬಾಲ್ಕನಿಗೆ ಬಂದ. ಎದುರಿನ ಕಿರಿದಾದ ಓಣಿಯ ಹಳೆಯ ಕಟ್ಟಡದ ಮೊದಲಂತಸ್ತಿನ ಆ ಕಿಡಕಿಯತ್ತ ದೃಷ್ಟಿ ಹರಿಯಿತು. ರಸ್ತೆಯ ಕಡೆ ತೆರೆದ ಕಿಡಕಿಯನ್ನು ಹೊಂಗೆಮರದ ಕೊಂಬೆಗಳು ಆವರಿಸಿದ್ದವು. ಇವನಿರುವ ಬಾಲ್ಕನಿಯ ಮೂಲೆಯಿಂದ ಕಿಡಕಿಯ ಒಳಗಿರುವ ಒಂದು ಭಾಗ ಗೋಚರಿಸುತ್ತಿತ್ತು. ಉದಯದ ಹೊಂಬಣ್ಣದ ಬೆಳಕಿನ ಕೋಲು ಕಿಡಕಿಯಲ್ಲಿ ತೂರಿ ಮಂಚದ ಮೇಲೆ ಮಲಗಿದ ಮುದುಕ ಶಂಕ್ರಜ್ಜನಿಗೆ ಕನಕಾಭಿಷೇಕ ಮಾಡುವುದನ್ನು ಮೊನ್ನೆ ನೋಡಿದ್ದ. ಬೆಳಕು ನುಗ್ಗಿದಾಗ ಮಾತ್ರ ಗೋಚರಿಸಿದ ಆ ಮುಖ, ಡಾರ್ಜಿಲಿಂಗದ ಟೈಗರ್ ಹಿಲ್‌ನಿಂದ ಕಾಣುವ ಕಾಂಚನ್‌ಜುಂಗಾದ ನೆನಪು ತರಿಸಿಬಿಟ್ಟಿತ್ತು. ಸೈಟು ಹೇಗಿದೆಯೋ ಹಾಗೆಲ್ಲ ಸಂದುಮೂಲೆ ನೋಡದೆ ಬಳಸಿ ಕಟ್ಟಿ ನಿಲ್ಲಿಸಿದ ಇಕ್ಕಟ್ಟಿನಲ್ಲಿ, ಅದು ಹೇಗೋ ನಿರ್ದಿಷ್ಟ ಕೋನ, ನಿರ್ದಿಷ್ಟ ಸಮಯದ ಸಂಧಿಸಾಧಿಸಿ ಬೆಳಕು ನುಗ್ಗಿ ಪವಾಡ ಸೃಷ್ಟಿಸುತ್ತಿತ್ತು. ಆಮೇಲೆ ಬಿಸಿಲಿನ ನೇರ ಮುಖಾಮುಖಿ ಮನೆಯೊಳಗೆ ಆಗುವ ಸಂಭವವಿಲ್ಲ. ಒಂದು ದೈವಿಕ ಪುಳಕಕ್ಕೊಳಗಾಗಿ ರೋಮಾಂಚನಗೊಂಡವನಿಗೆ ಸೂರ್ಯನ ಚಲನೆ ಬದಲಾಗಿ ಒಂದೆರಡು ದಿನದಲ್ಲಿ ಈ ದೃಶ್ಯ ಸಿಗದಾಗಬಹುದು. ಹೇಗಾದರೂ ಅದನ್ನು ಸೆರೆಹಿಡಿದು ಯಾವುದಾದರೂ ಪತ್ರಿಕೆಗೆ ಕಳಿಸಬೇಕೆನ್ನುವ ತವಕದಲ್ಲಿದ್ದ. ಈಗಲೂ ಬೆಳಕಿನ ಕೋಲು ಕಾವಲಿಯ ಮೇಲಿನ ಬಂಗಾರದ ರೊಟ್ಟಿಯಗಲಕ್ಕೆ ಕಿಡಕಿಯತ್ತ ಸರಿಯುವುದು ಕಾಣಿಸಿ ಓಡಿಹೋಗಿ ಮೊಬೈಲು ಎತ್ತಿಕೊಂಡು ಬಂದವ ಕಿಡಕಿಯತ್ತ ಕ್ಯಾಮರಾ ಕೇಂದ್ರೀಕರಿಸಿ ಸಾಧ್ಯವಾದಷ್ಟು ಝೂಂ ಮಾಡಿದ. ಅದೋ ಶಂಕ್ರಜ್ಜನ ಕತ್ತಿನ ಮೇಲಿದೆ ಬೆಳಕು; ಈಗ ಮುಖ ಕಾಣುತ್ತಿದೆ. ಅರೆ ಇದೇನು ಚೌಕಾಕಾರದ್ದು ಅಡ್ಡ ಬರುತ್ತಿದೆ! ಎರಡು ಕೈಗಳು, ಬಗ್ಗಿದ್ದು ಯಾರು ಅದು? ನೀಳಜಡೆ ಕೆಳಬಿದ್ದಿದೆ. ಏನು ಮಾಡುತ್ತಿದ್ದಾಳೆ? ಒಂದು ನಿಮಿಷ ಕಳೆದಿತ್ತೇನೊ ಮತ್ತೆ ಶಂಕ್ರಜ್ಜನ ಮುಖ ಕಾಣುತ್ತಿದೆ. ಆದರೆ ಬಿಸಿಲು ಮುಕ್ಕಾಲುಪಾಲು ಸರಿದುಬಿಟ್ಟಿದೆ. ಛೆ! ಇದೇ ಹೊತ್ತಿಗೆ ಇವಳ್ಯಾವಳೋ ಬಂದು ಎಲ್ಲಾ ಹಾಳುಮಾಡಿಬಿಟ್ಟಳು. ನಿರಾಸೆಯಲ್ಲಿ ಒಳಬಂದವನಿಗೆ ಹೇಗೂ ಭಾನುವಾರ, ತಿಂಡಿ ಮುಗಿಸಿಯೇ ಸ್ನಾನ ಮಾಡಿದರಾಯಿತು ಎನ್ನುವ ಆಲಸ್ಯ ಅಮರಿಕೊಂಡಿತು. ಈರುಳ್ಳಿ ಹಸಿಮೆಣಸನ್ನು ಸಣ್ಣಕೆ ಕೊಚ್ಚಿ, ನೆನೆಸಿದ ಅವಲಕ್ಕಿ ಸೇರಿಸಿ ಬಿಸಿವಗ್ಗರಣೆ ಮಾಡಿ ಪ್ಲೇಟಿಗೆ ಹಾಕಿಕೊಂಡು ಬಾಲ್ಕನಿಗೆ ಬಂದ. ಅಮ್ಮ ಅಡುಗೆ ತಿಂಡಿ ಮಾಡುವುದನ್ನು ವಿವರಿಸುವಾಗ ತಾನೂ ಆಸ್ಥೆಯಿಂದ ಕಲಿತ. ತನಗೆ ಗೊತ್ತಿರುವ ಮುಕ್ಕಾಲುಪಾಲು ಗಂಡಸರಿಗೆ ಅಡುಗೆ ಬರುವುದಿಲ್ಲ. ಅಮ್ಮನ ಅಂತಃಪ್ರಜ್ಞೆಗೆ ತನ್ನ ಭವಿಷ್ಯ ಗೊತ್ತಿತ್ತೇ ಅಂದುಕೊಳ್ಳುತ್ತ ಅವಲಕ್ಕಿ ಆಸ್ವಾದಿಸುತ್ತಿದ್ದವನಿಗೆ ಕೆಳಗೆ ಜನರ ತುಳಿತ, ವಾಹನಗಳ